**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 11/2016
ಪಿಡಬ್ಲು : 9 ಸಿಡಬ್ಲು : 22

| | |
|---|---|
| ಸಾಕ್ಷಿಯ ಹೆಸರು | : ಡಾ. ಆಂಜನೇಯ |
| ತಂದೆಯ ಹೆಸರು | : ಶ್ರೀ.ನೀಲಪ್ಪ |
| ವಯಸ್ಸು | : 49 ವರ್ಷ |
| ಉದ್ಯೋಗ | : ಆರಕ್ಷಕ ನೀರಿಕ್ಷಕರು, ಪೋಲಿಸ ತರಬೇತಿ ಶಾಲೆ, ಚಿತ್ರದುರ್ಗ ಜಿಲ್ಲೆ |
| ವಾಸ್ತವ್ಯ | : ಚಿತ್ರದುರ್ಗ |
| ದಿನಾಂಕ | : 09-06-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು 22-06-2014 ರಿಂದ 01-11-2015 ರ ವರೆಗೆ ನಾನು ಬೆಳಗಾವಿ ಜಿಲ್ಲೆ, ರಾಯಬಾಗ ತಾಲೂಕು, ಕುಡಚಿ ಪೋಲಿಸ ಠಾಣೆಯಲ್ಲಿ ಆರಕ್ಷಕ ಉಪ ನೀರಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕ 02-10-2015 ರಂದು ರಾತ್ರಿ 21.11 ಗಂಟೆಗೆ ನಾನು ಪ್ರಭಾರ ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿ ಈ ಪ್ರಕರಣದ ಪಿರ್ಯಾದಿದಾರರಾದ ಪ್ರಭಾಕರ ಪ್ರಕಾಶ ಅಸೊದೆ ಎನ್ನುವವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಅಪರಾಧ ಸಂಖ್ಯೆ252/2015 ನ್ನು ಭಾರತಿಯ ದಂಡ ಸಂಹಿತೆ ಕಲಂ.143, ಕಲಂ.147, ಕಲಂ.323, ಕಲಂ.448, ಕಲಂ.504, ಕಲಂ.506 ಸಹ ವಾಚಕ ಕಲಂ. 149 ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲಿನ ದೌರ್ಜನ್ಯ ನಿಷೇಧ ಕಾಯ್ದೆ 3(1) (x) ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ, ಚಾಸಾ-12, ಹೆಚ್.ಎನ್.ಮೋಮಿನ ಸಿ.ಪಿ.ಸಿ

2814 ಇವರ ಮುಖಾಂತರ ರಾತ್ರಿ 22.00 ಗಂಟೆಗೆ ಮೂಲ ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು 3 ನೇ ಹೆಚ್ಚುವರಿ ಸತ್ರ ನ್ಯಾಯಾಲಯ, ಬೆಳಗಾವಿಗೆ ಕಳುಹಿಸಿಕೊಟ್ಟಿದ್ದೇನೆ ಮತ್ತು ಅದರ ನಕಲುಗಳನ್ನು ನನ್ನ ಮೇಲಾಧಿಕಾರಿಗಳಿಗೆ ಕೊಟ್ಟಿದ್ದೇನೆ. ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ಗುರುತಿಸಿದ್ದಾರೆ. ದೂರನ್ನು ಈಗಾಗಲೇ ನಿಪಿ–5 ಎಂದು ಗುರುತಿಸಿದ್ದು ಅದರ ಮೇಲಿರುವ ಹಿಂಬರಹವನ್ನು ನಿಪಿ–5(ಬಿ) ಸಾಕ್ಷಿಯ ಸಹಿಯನ್ನು ನಿಪಿ–5 [ಸಿ] ಎಂದು ಗುರುತಿಸಲಾಯಿತು, ಪ್ರಥಮ ವರ್ತಮಾನ ವರದಿಯನ್ನು ಈಗಾಗಲೇ ನಿಪಿ–6 ಎಂದು ಗುರುತಿಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–6 [ಬಿ] ಎಂದು ಗುರುತಿಸಲಾಯಿತು.

3. ನಂತರ ಬೆಳಗಾವಿ ಜಿಲ್ಲಾ ಆರಕ್ಷಕ ಅಧೀಕ್ಷರ ಆದೇಶದ ಮೇರೆಗೆ ದಿನಾಂಕ 02–10–2015 ರಂದು ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ–23 ಬಿ ಎಸ್ ಅಂಗಡಿ ಡಿ.ವೈ.ಎಸ್. ಪಿ ಚಿಕ್ಕೋಡಿ ಅವರಿಗೆ ನೀಡಿದ್ದೇನೆ.

**ಪಾಟೀ ಸವಾಲುಃ 1, 2, 5, 6 ಮತ್ತು 9 ನೇ ಆರೋಪಿತರ ಪರ**

**ಶ್ರೀ.ಆರ್.ಸಿ.ಪಿ ವಕೀಲರಿಂದಃ**

4. ದೂರುದಾರರು ಠಾಣೆಗೆ ಬರುವಾಗಲೆ ದೂರನ್ನು ತಯಾರಿಸಿಕೊಂಡು ಬಂದಿದ್ದರು. ದೂರನ್ನು ನೀಡಲು ನನ್ನ ಕಚೇರಿಗೆ ದೂರುದಾರರು ಮಾತ್ರ ಬಂದಿದ್ದರು ಹೊರಗೆ ಎಷ್ಟು ಜನ ಇದ್ದರು ಎಂದು ನನಗೆ ಗೊತ್ತಿಲ್ಲ.

5. ದಿನಾಂಕ 01–10–2015 ರಂದು ಈ ಪ್ರಕರಣದ ಚಾಸಾ–6 ಫಿರೋಜ ಚೌಗಲಾ, ಚಾಸಾ–7 ಬೈರಪ್ಪ ಚೌಗಲಾ ಅವರು ಈ ಪ್ರಕರಣದ ಎಲ್ಲಾ ಆರೋಪಿತರ ಮನೆಗೆ ಹೋಗಿ ಹಲ್ಲೆ ಮಾಡಿದರು ಎಂದು, 1 ಮತ್ತು 2 ನೇ ಆರೋಪಿ ಕಾರಿನಲ್ಲಿ ಹೋಗುವಾಗ ಅವರನ್ನು ಅಡ್ಡಗಟ್ಟಿದರು ಎಂದು ಮತ್ತು 2 ನೇ ಆರೋಪಿಗೆ ಮಾನಹಾನಿ

ಮಾಡಲು ಪ್ರಯತ್ನ ಪಟ್ಟರು ಎಂದು 2 ನೇ ಆರೋಪಿ ದೂರು ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ಆ ಪ್ರಕರಣದ ಅಪರಾಧ ಸಂಖ್ಯೆ: 249/2015 ರಂತೆ ನಾನು ಪ್ರಕರಣವನ್ನು ನೋಂದಣಿ ಮಾಡಿದ್ದೇನೆ ಎನ್ನುವುದು ಸರಿ. ಚಾಸಾ-6 ಮತ್ತು 7 ರವರು ಹಾಗೂ ಅವರ ಅಣ್ಣ ತಮ್ಮಂದಿರು ಈ ಪ್ರಕರಣದ ಆರೋಪಿತರ ಮೇಲೆ ಹಲ್ಲೆ ಮಾಡಿ ದೂರು ದಾಖಲಾಗಿದ್ದರಿಂದ ಆ ಪ್ರಕರಣದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಈ ಪ್ರಕರಣವನ್ನು ಸೃಷ್ಟಿ ಮಾಡಲಾಗಿದೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ದೂರುದಾರ ಪ್ರಭಾಕರ, ಚಾಸಾ-6 ಫಿರೋಜ ಚೌಗಲಾ ಚಾಸಾ-7 ಭೈರಪ್ಪಾ ಚೌಗಲಾ ಇವರೊಂದಿಗೆ ಶಾಮಿಲಾಗಿ ಸುಳ್ಳು ದೂರನ್ನು ನೋಂದಣಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: 4, 8, 10 ಮತ್ತು 11 ನೇ ಆರೋಪಿತರ ಪರ**

**ಶ್ರೀ.ಯು.ಬಿ.ಜೆ ವಕೀಲರಿಂದ:**

6. ದೂರುನ್ನು ಎಲ್ಲಿ ಟೈಪ ಮಾಡಿಕೊಂಡು ಬರಲಾಯಿತು ಎಂದು ನಾನು ವಿಚಾರಿಸಿರುವುದಿಲ್ಲ. ದೂರನ್ನು ನಾನು ಓದಿ ನೋಡಿದ್ದೇನೆ. ದೂರನ್ನು ನೀಡಲು ತಡ ಆದ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ದೂರು ನೀಡಿದ ಕೂಡಲೇ ಅದು ಸಂಜ್ಞೆಯ ಅಪರಾಧ ಆಗಿದ್ದರಿಂದ ನಾನು ದೂರನ್ನು ನೋಂದಣಿ ಮಾಡಿದ್ದೇನೆ. ಪಾನ ಖರೀದಿಸಿದ ಬಗ್ಗೆ ಹಣ ನೀಡುವ ವಿಚಾರವಾಗಿ ಜಗಳ ಆಗಿದೆ ಎಂದು ದೂರಿನಲ್ಲಿ ಬರೆದಿದ್ದು ಆ ಪಾನ ಹಣ ಎಷ್ಟಿತ್ತು ಎಂದು ನಾನು ವಿಚಾರಿಸಿರುವುದಿಲ್ಲ. ಪಾನಿನ ವಿಚಾರವಾಗಿ ಯಾರಾದರೂ ಜಾತಿ ಹೆಸರು ತೆಗೆದು ಬೈಯುತ್ತಾರೆಯೇ ಅಥವಾ ಬೇರೆ ಯಾವುದಾರೂ ದ್ವೇಷ ಇತ್ತೆ ಎಂದು ನಾನು ದೂರುದಾರರನ್ನು ವಿಚಾರಿಸಿರುವುದಿಲ್ಲ.

7. ಈ ಪ್ರಕರಣದಲ್ಲಿನ ಚಾಸಾ-6 ಮತ್ತು 7 ರವರಿಗೆ ಯಾವ ವಿಚಾರದಲ್ಲಿ ದ್ವೇಷ ಇತ್ತು ಎಂದು ನಾನು ವಿಚಾರಿಸಿರುವುದಿಲ್ಲ. ಆರೋಪಿತರು ಚಾಸಾ-6, 7 ಮತ್ತು ಅವರ ಸಹೋದರರ ಮೇಲೆ ದೂರು ನೀಡಿದ್ದು, ಆ ದೂರು ನೋಂದಣಿ ಆಗಿದ್ದ ಕಾರಣ ಅದರ

ಪ್ರತೀಕಾರವಾಗಿ ಚಾಸಾ–1 ರವರು ಈ ದೂರನ್ನು ನೀಡಿದ್ದಾರೆ ಎನ್ನುವುದು ಸರಿಯಲ್ಲ. ಚಾಸಾ–6 ಮತ್ತು 7 ರವರು ಚಾಸಾ–1 ರವರ ಜಾತಿಯನ್ನು ದುರುಪಯೋಗ ಪಡಿಸಿಕೊಂಡು, ರಾಜಕೀಯ ಒತ್ತಡದಿಂದ ಈ ದೂರನ್ನು ನೋಂದಣಿ ಮಾಡಲಾಗಿದೆ ಎನ್ನುವುದು ಸರಿಯಲ್ಲ. 11 ಜನ ಆರೋಪಿತರ ವಿರುದ್ಧ ದೂರು ನೀಡಿದರೆ ಆರೋಪಿತರು ಚಾಸಾ–6 ಮತ್ತು 7 ಹಾಗೂ ಅವರ ಸಹೋದರರ ಮೇಲೆ ನೀಡಿರುವ ದೂರಿನಲ್ಲಿ ರಾಜಿ ಮಾಡಿಕೊಳ್ಳಬಹುದು ಎನ್ನುವ ಉದ್ದೇಶದಿಂದ ಈ ಪ್ರಕರಣ ದಾಖಲು ಮಾಡಲಾಗಿದೆ ಎನ್ನುವುದು ಸರಿಯಲ್ಲ. ನಿಪಿ–5 ದೂರಿನಲ್ಲಿ ಹೇಳಿದಂತಹ ಯಾವುದೇ ಘಟನೆ ಆಗಿಲ್ಲ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ 3 ಮತ್ತು 7 ನೇ ಆರೋಪಿತರ ಪರ**

**ಶ್ರೀ.ಎಸ್.ಸಿ.ಜೆ ವಕೀಲರಿಂದಃ**

ಶ್ರೀ.ಆರ್.ಸಿ.ಪಿ. ವಕೀಲರು ಮತ್ತು ಯು.ಜಿ.ಬಿ ವಕೀಲರು ಮಾಡಿರುವ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲೆಂದು ಅಳವಡಿಸಿಕೊಂಡಿದ್ದಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.